ಕನ್ನಡಪ್ರಭ
ಶುಕ್ರವಾರ 6.09.2024

ಸುದ್ದಿ ಸಿಂಚನ

ನ್ಯಾಯಾಂಗ ಆಡಳಿತ ತರಬೇತಿಗೆ ಅರ್ಜಿ ಆಹ್ವಾನ

ದೊಡ್ಡಬಳ್ಳಾಪುರ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವತಿಯಿಂದ 2023-24ನೇ ಸಾಲಿನಲ್ಲಿ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳಿಗೆ ಸೇರಿದ (ಪ್ರವರ್ಗ-1, 2ಎ, 3ಎ ಮತ್ತು 3ಬಿ) ಕಾನೂನು ಪಧವೀಧರರಿಂದ ನ್ಯಾಯಾಂಗ ಆಡಳಿತದಲ್ಲಿ 4 ವರ್ಷಗಳ ಅವಧಿಗೆ ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಈ ಕಚೇರಿಯಲ್ಲಿ ನಿಗದಿತ ಅವಧಿಯೊಳಗೆ ಕಚೇರಿ ವೇಳೆಯಲ್ಲಿ ಪಡೆದು ಭರ್ತಿ ಮಾಡಲಾದ ಅರ್ಜಿಗಳನ್ನು ಸದಸ್ಯ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಅಧಿಕಾರಿಗಳು, ಜಿಲ್ಲಾ ಅಧಿಕಾರಿಗಳ ಕಚೇರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ನಂ.215, ಎರಡನೇ ಮಹಡಿ, ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110 ಇಲ್ಲಿಗೆ ಅಕ್ಟೋಬರ್04 ರೊಳಗೆ ಸಲ್ಲಿಸಬಹುದು ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸದಸ್ಯ ಕಾರ್ಯದರ್ಶಿ ಹಾಗೂ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ರಾಮನಗರ: 2024-25ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ ಯೋಜನೆಯಡಿ ಅರ್ಹ ಅಲ್ಪಸಂಖ್ಯಾತರ ಸಮುದಾಯದ (1 ರಿಂದ 8ನೇ ತರಗತಿ) ವಿದ್ಯಾರ್ಥಿಗಳಿಗೆ ಆನ್‌ಲೈನ್ ಮೂಲಕ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು https://dom.karnataka.gov.in ಹಾಗೂ ರಾಜ್ಯ ವಿದ್ಯಾರ್ಥಿ ವೇತನ ಪೋರ್ಟಲ್ ಎಸ್‌ಎಸ್‌ಪಿ ಮೂಲಕ ಅಕ್ಟೋಬರ್31 ರೊಳಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 308, ಕಂದಾಯ ಭವನ ರಾಮನಗರ ಇಲ್ಲಿ ಕಚೇರಿ ವೇಳೆಯಲ್ಲಿ ಖುದ್ದು ಸಂಪರ್ಕಿಸಬಹುದು. ದೂ.080-27271104 ಅಥವಾ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರವನ್ನು ಸಂಪರ್ಕಿಸುವಂತೆ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಪಿಯು ಕಾಲೇಜಲ್ಲಿ ಶಿಕ್ಷಕರ ದಿನಾಚರಣೆ

ಸೂಲಿಬೆಲೆ: ಸೂಲಿಬೆಲೆ ಸರ್ಕಾರಿ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಪ್ರಾಂಶುಪಾಲರಾದ ಸುಬ್ರಮಣಿ ಸರ್ವಪಲ್ಲಿ ರಾಧಾಕೃಷ್ಣ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ನಮಿಸಿದರು. ಉಪನ್ಯಾಸಕರಾದ ಕುಮಾರ್, ನಾಗರಾಜ್, ಮೃತ್ಯುಂಜಯ, ಶ್ರೀಕೃಪಾ, ರೇಣುಕಮ್ಮ, ಶಿವಕುಮಾರ ಇತರರು ಇದ್ದರು.

ಜಿಲ್ಲೆಯ ಶಾಲೆಗಳ ಅಭಿವೃದ್ಧಿಗೆ ಕ್ರಮ: ಮುನಿಯಪ್ಪ

ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹೇಳಿಕೆ | ನವೀಕರಣ, ಆಟದ ಮೈದಾನ, ಶೌಚಗೃಹ, ಕುಡಿಯುವ ನೀರಿಗೆ ವ್ಯವಸ್ಥೆ

• **ಕನ್ನಡಪ್ರಭ ವಾರ್ತೆ** ದೇವನಹಳ್ಳಿ

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ನೂರೊಂದು ಸರ್ಕಾರಿ ಶಾಲೆಗಳನ್ನು ಪ್ರಥಮ ಹಂತದಲ್ಲಿ ಅಭಿವೃದ್ಧಿಯಾಗಲು ಕ್ರಮಕ್ಕೆ ಗೊಳ್ಳಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯಹಾರಗಳ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ತಾಲೂಕು ಆಡಳಿತ ಇವರ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಡಾ.ಅಂಬೇಡ್ಕರ್ ಭವನದಲ್ಲಿ ನಡೆದ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಲ್ಲ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಕಾರ್ಯನಿರ್ವಹಣಾಧಿಕಾರಿಗಳು ಸೇರಿ ಜಿಲ್ಲೆಯ ಪಂಚಾಯಿತಿ ಕೇಂದ್ರಗಳಲ್ಲಿನ ನೂರೊಂದು ಸರ್ಕಾರಿ ಶಾಲೆಗಳನ್ನು ನವೀಕರಣ ಮಾಡಿ ಗುಣಮಟ್ಟದ ಶೌಚಾಲಯ, ಕುಡಿಯುವ ನೀರು, ಆಟದ ಮೈದಾನ ಅಲ್ಲದೆ ಪೀಠೋಪಕರಣಗಳನ್ನು ಸಹ ಒದಗಿಸಬೇಕೆಂದು ತಿಳಿಸಲಾಗಿದೆ ಎಂದು ಹೇಳಿದರು. ದೇಶದ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಪ್ರಮುಖವಾಗಿದೆ. ಶಿಕ್ಷಕರು ತಮ್ಮ ಮಕ್ಕಳಿಗೆ ಹೇಗೆ ಶಿಕ್ಷಣ ನೀಡುತ್ತೀರಿ ಅದೇ ರೀತಿಯಲ್ಲಿ ಶಾಲೆಯ ಎಲ್ಲ ಮಕ್ಕಳಿಗೂ ಗುಣಮಟ್ಟದ ಶಿಕ್ಷಣಕ್ಕೆ ಆದ್ಯತೆ ನಿಡಬೇಕು ಎಂದರು.

ದೇವನಹಳ್ಳಿಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಸಮಾರಂಭದಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ಶಿಕ್ಷಕರಿಗೆ ಸಚಿವ ಕೆ.ಎಚ್. ಮುನಿಯಪ್ಪ ನೀಡಿ ಗೌರವಿಸಿದರು. ಶಾಂತಕುಮಾರ್ ಸೇರಿದಂತೆ ಅನೇಕರಿದ್ದರು.

ಸೂರಪಲ್ಲಿ ಆನಂದಾಶ್ರಮದ ಅಧ್ಯಕ್ಷ ಶ್ರೀ ಸೂರ್ಯನಾರಾಯಣಸ್ವಾಮಿ ಉಪನ್ಯಾಸ ನೀಡಿ, ಶಿಕ್ಷಕರಾದವರು ಮಕ್ಕಳಿಗೆ ಶಿಕ್ಷಣ ನೀಡುವುದರ ಜೊತೆಗೆ ಮಾನವೀಯ ಮೌಲ್ಯ, ನಮ್ಮ ದೇಶದ ಸಂಸ್ಕೃತಿಯನ್ನು ಕಲಿಸಬೇಕು ಎಂದು ಹೇಳಿದರು.

ಸಮಾರಂಭದಲ್ಲಿ ಜಿಲ್ಲಾ ಮಟ್ಟದ ಪ್ರಶಸ್ತಿ ಪಡೆದ ಶಿಕ್ಷಕರಿಗೆ ಹಾಗೂ ತಾಲೂಕು ಮಟ್ಟದ ಪ್ರತಿಭಾವಂತ ಶಿಕ್ಷಕರಿಗೆ ಸನ್ಮಾನಿಸಲಾಯಿತು.

ಜಿಲ್ಲಾಧಿಕಾರಿ ಡಾ.ಎನ್.ಶಿವಶಂಕರ್, ಜಿಪಂ ಸಿಇಒ ಡಾ.ಕೆ.ಎನ್.ಅನುರಾಧ, ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೃಷ್ಣಮೂರ್ತಿ, ತಹಶೀಲ್ದಾರ್ ಬಾಲಕೃಷ್ಣ, ತಾಲೂಕು ಪಂಚಾಯಿತಿ ಇಒ ಶ್ರೀನಾಥಗೌಡ, ವಿಜಯಪುರ ಪುರಸಭೆ ಮುಖ್ಯಾಧಿಕಾರಿ ಜಿ.ಆರ್.ಸಂತೋಷ್, ಬಯಪ ಅಧ್ಯಕ್ಷ ವಿ.ಶಾಂತಕುಮಾರ್, ಸದಸ್ಯರುಗಳಾದ ವಿ.ಮಂಜುನಾಥ್, ಪ್ರಸನ್ನಕುಮಾರ್, ರಾಮಚಂದ್ರಪ್ಪ, ಜಿಲ್ಲಾ ಪಂಚಾಯಿತಿ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಕೆ.ಸಿ.ಮಂಜುನಾಥ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಜಿಲ್ಲಾಧ್ಯಕ್ಷ ಬಿ.ರಾಜಣ್ಣ, ತಾಲೂಕು ಅಧ್ಯಕ್ಷ ಸಿ.ಜಗನ್ನಾಥ್ ಉಪಸ್ಥಿತರಿದ್ದರು.

ಸಿಎಂ ರವರಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ

ಮಾಗಡಿ ಶಾಸಕ ಎಚ್.ಸಿ.ಬಾಲಕೃಷ್ಣ ಮಾಹಿತಿ

ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಶಿಕ್ಷಕರನ್ನು ಅಭಿನಂದಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಮಾಗಡಿ

ಸೆ.13 ರಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಮಾಗಡಿಗೆ ಕರೆಸಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಲಾಗುತ್ತದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದರು.

ಡಾ. ಸರ್ವಪಲ್ಲಿ ರಾಧಾಕೃಷ್ಣರವರ ಜನ್ಮದಿನದ ಪ್ರಯುಕ್ತ ತಾಲೂಕು ಹಂತದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪಟ್ಟಣದಲ್ಲಿ 9 ಕೋಟಿ ವೆಚ್ಚದಲ್ಲಿ ಆಡಿಟೋರಿಯಂ ನಿರ್ಮಾಣ, 5 ಕೋಟಿ ವೆಚ್ಚದಲ್ಲಿ ಡಿಜಿಟಲ್ ಗ್ರಂಥಾಲಯ, ಹಲವು ವರ್ಷಗಳ ಬೇಡಿಕೆಯಾಗಿರುವ ಗುರುಭವನಕ್ಕೆ 6 ಕೋಟಿ ವೆಚ್ಚದಲ್ಲಿ ಕಾಮಗಾರಿಗೆ ಈಗಾಗಲೇ ಟೆಂಡರ್ ಹಂತದಲ್ಲಿ ಇದ್ದು ಮುಖ್ಯಮಂತ್ರಿಗಳ ವಿಶೇಷ ಅನುದಾನದ ಅಡಿ ನಿರ್ಮಾಣ ಮಾಡಲಾಗುತ್ತಿದೆ. ಜತೆಗೆ ಕುದೂರು ಮತ್ತು ಮಾಗಡಿಯಲ್ಲಿ ಸುಸಜ್ಜಿತ ಕ್ರೀಡಾಂಗಣ ನಿರ್ಮಾಣ ಮಾಡಲು ಶಂಕುಸ್ಥಾಪನೆ ಮಾಡಿಸಲಾಗುತ್ತದೆ ಈ ಮೂಲಕ ಶಿಕ್ಷಣ ಕ್ಷೇತ್ರಕ್ಕೆ ನಮ್ಮ ಸರ್ಕಾರ ಮೊದಲ ಆದ್ಯತೆಯನ್ನು ನೀಡಲಾಗುತ್ತದೆ ಸಿಎಸ್‌ಆರ್ ಅನುದಾನದ ಅಡಿ ತಾಲೂಕಿನಲ್ಲಿ ದುರಸ್ತಿ ಇರುವ ಶಾಲೆಗಳ ಕಟ್ಟಡಕ್ಕೆ ಅನುದಾನ ಬಿಡುಗಡೆ ಮಾಡಿ ಇನ್ನೂ ಎರಡು ವರ್ಷದಲ್ಲಿ ಯಾವುದೇ ಶಾಲೆಗೂ ಮೂಲಭೂತ ಸೌಲಭ್ಯಗಳ ಕೊರತೆ ಇರದಂತೆ ನೋಡಿಕೊಳ್ಳುವ ಕೆಲಸ ಮಾಡುತ್ತೇನೆ ಎಂದು ಭರವಸೆ ನೀಡಿದರು.

ಪಂಚಾಯಿತಿಗೊಂದು ಮಾದರಿ ಶಾಲೆ

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಮಾಜಿ ಸಂಸದರಾದ ಡಿ.ಕೆ.ಸುರೇಶ್ ರವರ ಕಲ್ಪನೆಯಂತೆ ಪಂಚಾಯಿತಿಗೊಂದು ಮಾದರಿ ಶಾಲೆಯ ಮೂಲಕ ವಿದ್ಯಾರ್ಥಿಗಳಿಗೆ 1 ರಿಂದ 12ನೇ ತರಗತಿ ಆರಂಭಿಸಿ ಎಲ್ಲಾ ರೀತಿಯ ಸೌಲಭ್ಯವನ್ನು ಕೊಟ್ಟು ಶಿಕ್ಷಕರಿಗೆ ಅಲ್ಲಿಯೇ ಅತಿಥಿ ಭವನ ನಿರ್ಮಾಣ ಮಾಡುವ ಮೂಲಕ ಗುರುಕುಲ ಪದ್ಧತಿಯನ್ನು ಅನುಸರಿಸುವ ಕೆಲಸ ಮಾಡಲಾಗುತ್ತಿದ್ದು ಇದಕ್ಕಾಗಿ ನಮ್ಮ ತಾಲೂಕಿನಲ್ಲಿ 5 ರಿಂದ 6 ಎಕರೆ ಜಾಗವನ್ನು ಪಂಚಾಯಿತಿಗೊಂದು ಮಾದರಿ ಶಾಲೆ ಮಾಡುವ ನಿಟ್ಟಿನಲ್ಲಿ 6 ಕಡೆ ಪಂಚಾಯಿತಿ ಮಾದರಿ ಶಾಲೆ ಮಾಡಲು ಹೊರಟಿದ್ದು ಈ ಮೂಲಕ ಗುಣಮಟ್ಟದ ಶಿಕ್ಷಣ ಸರ್ಕಾರಿ ಶಾಲಾ ಮಕ್ಕಳಿಗೆ ಸಿಗುವ ನಿಟ್ಟಿನಲ್ಲಿ ನಮ್ಮ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಬಾಲಕೃಷ್ಣ ತಿಳಿಸಿದರು.

ಬಿಇಒ ಚಂದ್ರಶೇಖರ್‌ಮಾತ ನಾಡಿ, ಎನ್‌ಜಿಒಗಳ ಮೂಲಕ ಸರ್ಕಾರಿ ಹೆಚ್ಚಿನ ಸೌಲಭ್ಯಗಳನ್ನು ಕೊಡಿಸುವ ಕೆಲಸ ಮಾಡಲಾಗುತ್ತಿದ್ದು ಮಾಗಡಿ ತಾಲೂಕಿನಲ್ಲಿ ಒಟ್ಟು 850 ಶಿಕ್ಷಕರು ಬೇಕಾಗಿದ್ದು ಇದರಲ್ಲಿ 670 ಶಿಕ್ಷರು ಈಗ ಕೆಲಸ ಮಾಡುತ್ತಿದ್ದು ಉಳಿದ ಶಿಕ್ಷಕರನ್ನು ಅತಿಥಿ ಶಿಕ್ಷಕರ ರೂಪದಲ್ಲಿ ಕೆಲಸ ಮಾಡಿಸಲಾಗುತ್ತಿದೆ ಎಂದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ಶರತ್ ಕುಮಾರ್, ತಾಪಂ ಇಒ ಡಿ.ಜೈಪಾಲ್, ನರಸಿಂಹಮೂರ್ತಿ, ಸರ್ಕಾರಿ ನೌಕರ ಸಂಘದ ಅಧ್ಯಕ್ಷ ಸಿ.ಪ್ರಕಾಶ್, ಟಿ.ಬಿ. ಗುಣಶೇಖರ್, ಪದ್ಮನಾಭ, ಟಿ. ಶ್ರೀನಿವಾಸ್, ಮಂಜುನಾಥ್, ರಾಜ್ಯ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಚ್. ಲೋಕೇಶ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಜಗೋಪಾಲ್, ಸಂಪನ್ಮೂಲ ಅಧಿಕಾರಿ ಗುಲ್ಜಾರ್‌ಅಹಮದ್, ಗಂಗಾಧರಯ್ಯ, ಮುನಿಯಪ್ಪ, ನಾರಾಯಣ್, ಶಿಕ್ಷಕರಾದ ಜಯರಾಂ, ಮಲ್ಲೂರ್ ಲೋಕೇಶ್, ಕೆ.ಪಿ.ರಂಗಸ್ವಾಮಿ ಸೇರಿದಂತೆ ತಾಲೂಕಿನ ವಿವಿಧ ಶಾಲೆಯ ಶಿಕ್ಷಕರು ಭಾಗವಹಿಸಿದ್ದರು.

ಉತ್ತಮ ಸಮಾಜ ನಿರ್ಮಾಣದಲ್ಲಿ ಶಿಕ್ಷಕರ ಪಾತ್ರ ನಿರ್ಣಾಯಕ

ದೊಡ್ಡಬಳ್ಳಾಪುರದಲ್ಲಿ ನಡೆದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಶಾಸಕ ಧೀರಜ್

• **ಕನ್ನಡಪ್ರಭ ವಾರ್ತೆ** ದೊಡ್ಡಬಳ್ಳಾಪುರ

ಉತ್ತಮ ಸಮಾಜ ನಿರ್ಮಾಣ ಹಾಗೂ ಉತ್ತಮ ಪ್ರಜೆಗಳನ್ನು ಸಿದ್ದಗೊಳಿಸುವ ಗುರುತರವಾದ ಜವಾಬ್ದಾರಿ ಶಿಕ್ಷಕರ ಮೇಲಿದೆ ಎಂದು ಶಾಸಕ ಧೀರಜ್ ಮುನಿರಾಜ್ ಹೇಳಿದರು.

ಅವರು ನಗರದ ಕೆಎಂಎಚ್ ಸಮುದಾಯ ಭವನದಲ್ಲಿ ಗುರುವಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂ.ಗ್ರಾ ಜಿಲ್ಲಾ ಪಂಚಾಯಿತಿ, ವಿವಿಧ ಶಿಕ್ಷಕರ ಸಂಘಟನೆಗಳ ಸಹಯೋಗದಲ್ಲಿ ನಡೆದ ಡಾ.ಎಸ್.ರಾಧಾಕೃಷ್ಣನ್ ಅವರ ಜನ್ಮದಿನಾಚರಣೆ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇಶದ ಪ್ರಗತಿಯಲ್ಲಿ ಶಿಕ್ಷಣದ ಪಾತ್ರ ಮಹತ್ವದ್ದಾಗಿದೆ. ಇಂದು ಶಿಕ್ಷಣ ಎಲ್ಲರಿಗೂ ದೊರಕಬೇಕಿದ್ದು ತಾಲೂಕಿನಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಅಭಿವೃದ್ಧಿ ಕೆಲಸಗಳು ಬಾಕಿ ಇವೆ. ಸರ್ಕಾರಗಳು ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಣಕ್ಕೆ ಹೆಚ್ಚಿನ ಆರ್ಥಿಕ ನೆರವನ್ನು ಒದಗಿಸಬೇಕು.

ಶೈಕ್ಷಣಿಕ ಮೂಲಸೌಕರ್ಯ ವೃದ್ದಿಗೆ ವಿಶೇಷ ಆದ್ಯತೆ ನೀಡುವುದು ಅವಶ್ಯ ಎಂದರು.

ದೊಡ್ಡಬಳ್ಳಾಪುರದಲ್ಲಿ ನಡೆದ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು.

ಈ ಬಾರಿ ತಾಲೂಕಿನ ಬಾಶೆಟ್ಟಿಹಳ್ಳಿಯ ಸರ್ಕಾರಿ ಪ್ರೌಢಶಾಲೆ ಮುಖ್ಯಶಿಕ್ಷಕ ನಾರಾಯಣಸ್ವಾಮಿ ಅವರಿಗೆ ರಾಷ್ಟ್ರೀಯ ಪುರಸ್ಕಾರ, ಬೀಡಿಗೆರೆಯ ಸರ್ಕಾರಿ ಶಾಲೆ ಮುಖ್ಯಶಿಕ್ಷಕಿ ಮಂಗಳಾ ಕುಮಾರಿ ಅವರಿಗೆ ರಾಜ್ಯ ಪ್ರಶಸ್ತಿ ದೊರೆತಿರುವುದು ತಾಲೂಕಿಗೆ ಸಂದ ಗೌರವವಾಗಿದೆ ಎಂದು ಗಣ್ಯರು ಅಭಿಪ್ರಾಯಪಟ್ಟರು. ಸಮಾರಂಭದಲ್ಲಿ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರು, ಶಾಲಾ ಶಿಕ್ಷಣ ಇಲಾಖೆ ಅಧಿಕಾರಿಗಳು, ತಾಲೂಕು ಮಟ್ಟದ ಇಲಾಖೆಗಳ ಅಧಿಕಾರಿಗಳು ಸೇರಿದಂತೆ ತಾಲೂಕಿನ ಶಿಕ್ಷಕರ ಸಂಘದ ಪದಾಧಿಕಾರಿಗಳು ಇದ್ದರು. ಇದಕ್ಕೂ ಮುನ್ನ ಗುರುಭವನ ಮುಂಭಾಗದಿಂದ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಭಾವಚಿತ್ರದ ಬೆಳ್ಳಿ ಪಲ್ಲಕ್ಕಿ ಉತ್ಸವ ನಡೆಯಿತು.

ಸೂಲಿಬೆಲೆ ಸಮೀಪದ ಬೇಗೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆ ನಡೆಯಿತು. ಮುಖ್ಯಶಿಕ್ಷಕ ವೆಂಕಟೇಶ್, ಸಹ ಶಿಕ್ಷಕ ಅಂಬರೀಶ್, ಮಂಗಳಗೌರಿ ಭಟ್ ಇತರರು ಇದ್ದರು.

ಸಮಸ್ಯೆಗಳನ್ನು ಬಗೆಹರಿಸಿ ರೈತರನ್ನು ಉಳಿಸಿ

ಹೊಸಪಾಳ್ಯ ಲೋಕೇಶ್ ಆಕ್ರೋಶ | ಬೆಸ್ಕಾಂ ವಿರುದ್ಧ ರೈತರ ಪ್ರತಿಭಟನೆ | ಅಧಿಕಾರಿಗಳಿಗೆ ಮನವಿ ಸಲ್ಲಿಕೆ

• **ಕನ್ನಡಪ್ರಭ ವಾರ್ತೆ** ಮಾಗಡಿ

ಬೆಸ್ಕಾಂ ಇಲಾಖೆಯ ವ್ಯಾಪ್ತಿಯಲ್ಲಿ ಎದುರಿಸುತ್ತಿರುವ ಹಲವಾರು ಸಮಸ್ಯೆಗಳನ್ನು ಬಗೆಹರಿಸಿ ತಾಲೂಕಿನ ರೈತರನ್ನು ಉಳಿಸಿ ಎಂದು ತಾಲೂಕು ರೈತ ಸಂಘದ ಅಧ್ಯಕ್ಷ ಹೊಸಪಾಳ್ಯ ಲೋಕೇಶ್ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಬೆಸ್ಕಾಂ ಕಚೇರಿಯ ಮುಂಭಾಗ ಗುರುವಾರ ಬೆಸ್ಕಾಂ ಇಲಾಖೆಯ ನಿರ್ಲಕ್ಷ್ಯ ಧೋರಣೆಯ ವಿರುದ್ಧ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

ಪಟ್ಟಣದಲ್ಲಿರುವ ಕಾರ್ಖಾನೆಗಳಿಗೆ ಸಮರ್ಪಕವಾಗಿ ವಿದ್ಯುತ್ ನೀಡುತ್ತಿರುವ ಬೆಸ್ಕಾಂ ಇಲಾಖೆ ರೈತರಿಗೆ ಮಾತ್ರ ಲೋಡ್ ಶೆಡ್ಡಿಂಗ್ ನೆಪವೊಡ್ಡಿ ಕಡಿತ ಮಾಡುತ್ತಿರುವುದು ಯಾವ ನ್ಯಾಯ? ಇದರೊಂದಿಗೆ ತಾಲ್ಲೂಕಿನಲ್ಲಿ ವಿದ್ಯುತ್‌ನ ಕಣ್ಣಾ ಮುಚ್ಚಾಲೆಯಾಟ ತೀವ್ರ ಗೊಂಡಿದೆ. ಇದರಿಂದ ಕೃಷಿ ಚಟುವಟಿಕೆಗಳು ಸೇರಿದಂತೆ ಎಲ್ಲ ವರ್ಗದವರ ಕೆಲಸ ಕಾರ್ಯಗಳಿಗೂ ಅಡಚಣೆಯಾಗಿದೆ. ಅದರಲ್ಲೂ ವಿದ್ಯಾರ್ಥಿಗಳು, ರೈತರ ಸಮಸ್ಯೆ ಯಂತೂ ತೀವ್ರಗೊಂಡಿದೆ ಎಂದು ದೂರಿದರು.

ಬೆಸ್ಕಾಂ ನಿರ್ಲಕ್ಷ್ಯ ಧೋರಣೆ ವಿರುದ್ಧ ಪ್ರತಿಭಟನೆ ನಡೆಸಿ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಎಚ್ಚರಿಕೆಯ ಮನವಿ: ಬೆಸ್ಕಾಂ ಇಲಾಖೆಯ ವ್ಯಾಪ್ತಿಯಲ್ಲಿ ತಾಲ್ಲೂಕಿನ ರೈತರು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾದ ಕೃಷಿ ಪಂಪ್ ಸೆಟ್‌ಗಳಿಗೆ ಆಧಾರ್‌ಲಿಂಕ್ ಅಳವಡಿಕೆ ಕೈ ಬಿಡಬೇಕು. ಬೆಳಗಿನ ಸಮಯದಲ್ಲಿ 12 ಗಂಟೆಗಳ ವಿದ್ಯುತ್ ಪೂರೈಕೆ ಮಾಡಬೇಕು. ನಿರಂತರ ಜ್ಯೋತಿ ನೀಡಬೇಕು. ಟಿಸಿ ಅಳವಡಿಕೆಯಲ್ಲಿ ಹಾಗೂ ದುರಸ್ತಿಯ ಬಗ್ಗೆ ಇರುವ ಗೊಂದಲ ಸರಿಪಡಿಸಿ ರೈತರಿಗೆ ಅನುಕೂಲ ಮಾಡಿಕೊಡಬೇಕು. ತಿಂಗಳಿಗೊಮ್ಮೆ ರೈತರ ಸಭೆ ಕರೆದು ಸಮಸ್ಯೆಗಳನ್ನು ಬಗೆಹರಿಸಲು ಮುಂದಾಬೇಕು. ಸಮರ್ಪಕವಾಗಿ ವಿದ್ಯುತ್ ಪೂರೈಸಿ ಇಲ್ಲವಾದಲ್ಲಿ ಪರಿಸ್ಥಿತಿ ಬಿಗಡಾಯಿಸಲಿದ್ದು, ಮುಂದಿನ ಆಗು ಹೋಗುಗಳಿಗೆ ಇಲಾಖೆಯ ಅಧಿಕಾರಿಗಳೇ ಹೊಣೆಯಾಗಬೇಕಾದೀತು ಎಂದು ಕಾರ್ಯನಿರ್ವಾಹಕ ಅಭಿಯಂತರಿಗೆ ಮನವಿಯನ್ನು ಸಲ್ಲಿಸುವ ಮೂಲಕ ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ರೈತ ಸಂಘದ ತಾಲ್ಲೂಕು ಯುವ ಘಟಕ ಅಧ್ಯಕ್ಷ ರವಿಕುಮಾರ್, ಗೌರವಾಧ್ಯಕ್ಷ ಶಿವಲಿಂಗಯ್ಯ, ಪದಾಧಿಕಾರಿಗಳಾದ ಕಾಂತರಾಜು, ನಾರಾಯಣ್, ಮೇಗಳದೊಡ್ಡಿ ಷಡಾಕ್ಷರಿ, ಬುಡನ್ ಸಾಬ್, ಕಲೀಂ, ಗುಡ್ಡಹಳ್ಳಿ ರಾಮಣ್ಣ, ಬಾಳೆಕಾಯಿ ನಿಂಗಣ್ಣ, ಶಿವಲಿಂಗಯ್ಯ, ರಂಗಸ್ವಾಮಯ್ಯ, ಹೊನ್ನೇಗೌಡ್ರು, ವೆಂಕಟೇಶ್, ಕೃಷ್ಣ ಇದ್ದರು.

ಹೈನುಗಾರಿಕೆಯಿಂದ ಗ್ರಾಮೀಣ ಭಾಗದ ಜನರ ಬದುಕು ಹಸನು

ಕನಕಪುರ: ಹೈನುಗಾರಿಕೆಯಿಂದ ಗ್ರಾಮೀಣ ಭಾಗದ ಜನರ ಬದುಕು ಹಸನಾಗಿದೆ ಎಂದು ಬೆಂಗಳೂರು ಸಹಕಾರ ಹಾಲು ಒಕ್ಕೂಟ ಕನಕಪುರ ಶಿಬಿರದ ವಿಸ್ತರಣಾಧಿಕಾರಿ ಕೆ.ಎಸ್.ಅರುಣ್ ಕುಮಾರ್ ತಿಳಿಸಿದರು.

ತಾಲೂಕಿನ ಕಸಬಾ ಹೋಬಳಿಯ ಕೂತಗೊಂಡನಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ 2023- 24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಮಾತನಾಡಿದರು.

ಹಿಂದೆ ಕೆಲಸಗಳನ್ನು ಅರಸಿ ಹೊರ ಊರುಗಳಿಗೆ ಹೋಗಿದ್ದ ಬಹುತೇಕ ಕುಟುಂಬಗಳು ಇಂದು ತಮ್ಮ ಸ್ವಗ್ರಾಮಗಳಲ್ಲಿ ಬಂದು ನೆಲೆಸಿ ಹೈನುಗಾರಿಕೆಯಿಂದ ತಮ್ಮ ಬದುಕನ್ನು ರೂಪಿಸಿಕೊಳ್ಳುತ್ತಿರುವುದು ನಿಜಕ್ಕೂ ಶ್ಲಾಘನೀಯ ವಿಷಯವಾಗಿದೆ ಎಂದರು.

ಕೆ.ಎಚ್.ರಾಮಕೃಷ್ಣ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ 23-24ನೇ ಸಾಲಿನ ಲೆಕ್ಕಪರಿಶೋಧನೆಯ ವರದಿಯನ್ನು ಕಾರ್ಯಕಾರಿ ಮಂಡಳಿಯ ಅಪ್ಪಣೆ ಮೇರೆಗೆ ಪ್ರಭಾರ ಮುಖ್ಯ ಕಾರ್ಯನಿರ್ವಾಹಕ ಸುಂದರ ಕೃಷ್ಣ.ಕೆ.ಆರ್ ಮಂಡಿಸಿದರು. ಗ್ರಾಮದ ಮುಖಂಡರಾದ ನಾರಾಯಣಸ್ವಾಮಿ ಕೃಷ್ಣಪ್ಪ, ಸಂಘದ ಉಪಾಧ್ಯಕ್ಷ ಕೆ.ವಿ.ಜಯರಾಮು, ನಿರ್ದೇಶಕರಾದ ಸ್ವಾಮಿ, ಹನುಮಾನ್, ರಮೇಶ್, ಅನುಸೂಯಮ್ಮ, ನಾರಾಯಣ, ಕಮಲಮ್ಮ, ಮುತ್ತಯ್ಯ, ಸ್ವಾಮಿ, ವೆಂಕಟೇಶ ಸೇರಿದಂತೆ ನೂರಕ್ಕೂ ಅಧಿಕ ಮಂದಿ ಉಪಸ್ಥಿತರಿದ್ದರು.

ಮಾನ್ಯ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ರಾಮನಗರ
ಎಂ.ಎ. ನಂ. 38/2023
ಅಪೀಲುದಾರರು: ಸಿ.ಆರ್. ಪುಷ್ಪಲತಾ ಕೋಂ. ಗಂಗಣ್ಣ ಆರ್.
ವಿರುದ್ಧ
ಪ್ರತಿವಾದಿಗಳು: ಸಿ. ರಂಗಸ್ವಾಮಿ ಮತ್ತು ಇತರರು
9ನೇ ಪ್ರತಿವಾದಿ : ಎಂ.ವೈ. ಜಯರಾಮ ಬಿನ್ ಲೇಟ್ ಯಲನಾಗಪ್ಪ, ವಯಸ್ಸು 85 ವರ್ಷ, ನಂ. 6, 3ನೇ ಅಡ್ಡರಸ್ತೆ, ಕೆ.ಹೆಚ್.ಬಿ. ಕಾಲೋನಿ, ಗೋವಿಂದರಾಜನಗರ, ಮಾಗಡಿ ರಸ್ತೆ, ಬೆಂಗಳೂರು - 560 079.
10ನೇ ಪ್ರತಿವಾದಿ : ಶ್ರೀಮತಿ ಎಂ. ರಾಧ ಕೋಂ ಲೇಟ್ ಹೆಚ್.ಎಂ. ಮರಿಯಪ್ಪ, ವಯಸ್ಸು 55 ವರ್ಷ, ನಂ. 45, 2ನೇ ಮುಖ್ಯರಸ್ತೆ, 4ನೇ ಹಂತ, 4ನೇ ಬ್ಲಾಕ್, ಬಸವೇಶ್ವರನಗರ, ಬೆಂಗಳೂರು - 560 079.
17ನೇ ಪ್ರತಿವಾದಿ : ಪರಸ್ಮಾಲ್ ಜೈನ್ ಬಿನ್ ಲೇಟ್ ಬವರ್‌ಲಾಲ್ ಮಹಾಜನ್, ವಯಸ್ಸು 49 ವರ್ಷ, ನಂ. 22/2, 6ನೇ ಕ್ರಾಸ್, 6ನೇ ಮುಖ್ಯರಸ್ತೆ, ಅಗ್ರಹಾರ, ದಾಸರಹಳ್ಳಿ, ಚುಂಚನಕುಪ್ಪೆ ಅಂಚೆ, ತಾವರೆಕೆರೆ ಹೋಬಳಿ, ಬೆಂಗಳೂರು - 562 130.
ಪತ್ರಿಕಾ ಪ್ರಕಟಣೆ
ಈ ಮೂಲಕ ತಮಗೆ ತಿಳಿಯ ಪಡಿಸುವುದೇನೆಂದರೆ, ವಾದಿಗಳು ಮಾನ್ಯ 3ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ರಾಮನಗರದಲ್ಲಿ ಮೇಲ್ಕಂಡ 9, 10 ಮತ್ತು 17ನೇ ಪ್ರತಿವಾದಿ ಮತ್ತು ಇತರೆ ಪ್ರತಿವಾದಿಗಳ ವಿರುದ್ಧ, ಮೂಲ ದಾವಾ ಸಂಖ್ಯೆ 313/2022 ರಲ್ಲಿ 25-09-2023 ರಂದು ಸೀನಿಯರ್ ಸಿವಿಲ್ ಜಡ್ಜ್, ಮಾಗಡಿ ಆದೇಶದ ಪ್ರತಿಸ್ಪಿ ಅಪೀಲು ಎಂ.ಎ. ಸಂಖ್ಯೆ 38/2023 ರಂತೆ ಅಪೀಲು ಸಲ್ಲಿಸಿದ್ದು, ತಮ್ಮನ್ನು ಪ್ರತಿವಾದಿ 9, 10, 17 ಎಂದು ಈ ಅಪೀಲಿನಲ್ಲಿ ಪಕ್ಷಗಾರರಾಗಿ ಮಾಡಿದ್ದು, ತಮ್ಮ ಹಾಜರಾತಿಗಾಗಿ ಸದರಿ ದಾವೆಯಲ್ಲಿ ಮಾನ್ಯ ನ್ಯಾಯಾಲಯವು ದಿನಾಂಕ : 21.09.2024 ಕ್ಕೆ ಗೊತ್ತುಪಡಿಸಿದ್ದು, ತಾವುಗಳೇ ಆಗಲಿ ಅಥವಾ ತಮ್ಮ ಪರ ವಕೀಲರಾಗಲೀ ಸದರಿ ದಿನಾಂಕದಂದು ಬೆಳಿಗ್ಗೆ 11.00 ಗಂಟೆಗೆ ಸದರಿ ನ್ಯಾಯಾಲಯದಲ್ಲಿ ಖುದ್ದು ಹಾಜರಾಗಲು ಸೂಚಿಸಲಾಗಿದ್ದು, ಒಂದು ವೇಳೆ ತಾವು ಗೈರು ಹಾಜರಾದಲ್ಲಿ ತಮ್ಮ ಗೈರು ಹಾಜರಾತಿಯನ್ನು ಘನ ನ್ಯಾಯಾಲಯವು ನಿಮ್ಮಗಳನ್ನು ಏಕಪಕ್ಷಗಾರರೆಂದು ಪರಿಗಣಿಸಿ ನಿಮ್ಮ ಗೈರು ಹಾಜರಿಯಲ್ಲಿ ದಾವೆಯನ್ನು ಇತ್ಯರ್ಥಪಡಿಸಲು ಮುಂದುವರೆಯುತ್ತದೆ.
ದಿನಾಂಕ: 3.9.2024 ರಂದು ನ್ಯಾಯಾಲಯದ ಸಹಿ ಮತ್ತು ಮುದ್ರೆಯೊಂದಿಗೆ ನೀಡಲಾಗಿದೆ.
By order of the Court, Chief Administrative Officer, District & Sessions Court, Ramanagara.
ವಾದಿಗಳ ಪರ ವಕೀಲರು:
ಎ. ರಾಮಾಂಜನಪ್ಪ, ವಕೀಲರು, ರಾಮನಗರ

ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರಾದ ಶ್ರೀ.ಅಮರೇಶ ಬಾಬು.ಕೆ, R/a # 254, 13ನೇ ಕ್ರಾಸ್, 2ನೇ ಎ ಮೇನ್, ವಿಜ್ಞಾನನಗರ, ಹೊಸ ತಿಪ್ಪಸಂದ್ರ ಪೋಸ್ಟ್, ಬೆಂಗಳೂರು ಮೇಲಿನ ವಿಳಾಸದ ನಿವಾಸಿಯನ್ನು ದೃಢೀಕರಿಸುತ್ತೇನೆ.
ದಿನಾಂಕ: 05/09/2024 ರಂದು ಫೆಡರಲ್ ಬ್ಯಾಂಕ್ ವಿಜ್ಞಾನನಗರ ಶಾಖೆಯ ಬಳಿ ಕ್ರಯಪತ್ರವನ್ನು ನನ್ನ ಗ್ರಾಹಕರು ಈ ಕೆಳಗೆ ತಿಳಿಸಲಾದ ಕ್ರಯಪತ್ರವು ಕಳೆದುಕೊಂಡಿದ್ದಾರೆ.
ಮನೆ ಆಸ್ತಿ ಸಂಖ್ಯೆ 8, ಬಿಬಿಎಂಪಿ ಖಾತಾ ಸಂ.359/74/8 ಅಳತೆಯ (40×30) ಅಡಿ, ಮಲ್ಲೇಶಪಾಳ್ಯ, ಕಗ್ಗದಾಸಪುರ ಗ್ರಾಮ, ಕೆ.ಆರ್.ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೂಕಿನಲ್ಲಿದೆ, 15/05/1989 ರ ದಾಖಲೆ ಸಂಖ್ಯೆ.2274/1989-90 ರ ಈ ಮೇಲಿನ ಮೂಲ ಮಾರಾಟ ಪತ್ರ (ಮದರ್ ಡೀಡ್) ಎಸ್‌ಆರ್‌ಒ, ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿಯಲ್ಲಿ ನೋಂದಾಯಿಸಲಾಗಿದೆ. ದಿನಾಂಕ: 05/09/2024 ರಂದು ಆನ್‌ಲೈನ್‌ನಲ್ಲಿ ಪೊಲೀಸರು ದೂರು ದಾಖಲಾಗಿರುತ್ತದೆ. ಕಳೆದುಹೋದ ವರದಿಯನ್ನು 1226583/2024 ಈ ಪರಿಣಾಮಕ್ಕೆ ಸರಿಯಾಗಿ ಅಂಗೀಕರಿಸಲಾಗಿದೆ. ಮೇಲಿನ ಸಾರ್ವಜನಿಕ ಸೂಚನೆಯನ್ನು ನೀಡಲಾಗಿದೆ. ಹೇಳಲಾದ ದಾಖಲೆಯ ಹಕ್ಕು / ಹೊಂದಿರುವ ಯಾವುದೇ ವ್ಯಕ್ತಿಗಳು 14 (ಹದಿನಾಲ್ಕು ದಿನಗಳು) ಒಳಗೆ ಕೆಳಗೆ ಸಹಿ ಮಾಡಿದವರಿಗೆ ಪ್ರತಿನಿಧಿಸಬಹುದು, ಅದು ವಿಫಲವಾದರೆ ಯಾವುದೇ ಹಕ್ಕುಗಳಿಲ್ಲ ಎಂದು ತೆಗೆದುಕೊಳ್ಳಲಾಗುತ್ತದೆ.
ಎ. ಪ್ರಶಾಂತ್, ವಕೀಲರು
ನಂ.3755 ಸಂಪ್ರತಿ, ದೇಶದಪೇಟೆ,
ದೊಡ್ಡಬಳ್ಳಾಪುರ ಟೌನ್-561203. ಮೊಬೈಲ್: 9886628181.

IN THE COURT OF SENIOR CIVIL JUDGE AT HOSAKOTE
O.S. No. 420/2024
BETWEEN: Smt. Rathnamma...Plaintiff
AND : Sri. Nagappa and another ...Defendants
SUMMONS TO DEFENDANTS No.1(a) to (d) BY PAPER PUBLICATION UNDER ORDER 5 RULE 20 OF CPC
Address of the Defendants No. 1(a) to 1(d)
1(a) Sri. Ramachandra, Son of Late. Nagappa, Major in age
1(b) Smt. Prema, Daughter of Late. Amravathi, Major in age,
1(c) Mr. Manjunath, Son of Late. Nagappa, Major in age,
1(d) Smt. Yashodamma, Daughter of Late. Nagappa, Major in age.
All residing at Sathayavara Village, Sulibele Hobli, Hoskote Taluk, Bengaluru Rural.
WHEREAS:- The plaintiff has filed the above suit for partition and separate possession against you with respect of the suit schedule properties against all you before the Hon'ble Senior Civil Court at Hosakote.
You are hereby summoned to appear on 25/09/2024 at 11:00 a.m., before the Hon'ble Senior Civil Judge at Hosakote, in person or through duly instructed advocate, failing which the matter will be decided ex-party.
SCHEDULE-"A"
ITEM No. 1 : All that piece and parcel of the property bearing Sy.No. 57/2 measuring 2 acres 26 guntas situate at M Sathyavara Village, Sulibele Hobli, Hosakote Taluk and bounded on: East by: Land of Narayanaswamy, West by : Land of Uthanallappa, North by: Land of Uthanallappa and South by : Land of Pillapapalah.
ITEM No. 2 : All that piece and parcel of land measuring 2 acres 20 guntas of Sy.No.56, M Sathyavara Village, Sulibele Hobli, Hosakote Taluk, Bangalore Rural District and bounded on: East by: Dongare, West by: Lands of Pillananjappa and Utthanallappa, North by: Lands of Venkateshappa and South by: Lands of Nanjappa and Munibyrappa.
ITEM No. 3 : All that piece and parcel of agricultural land bearing Sy.No. 63 measuring 1 acre 10 guntas situate at M Sathyavara Village, Sulibele Hobli, Hosakote Taluk, Bangalore Rural District, and bounded on: East by: Lands of Jnyaramappa, West by: Lands of Munibyrappa and Lakshmaiah, North by: Land of Jayaramappa, and South by: Kere Angala.
ITEM No. 4 : All that piece and parcel of agricultural land bearing Sy.No. 30/1 measuring 0.04 1/2 guntas situate at M Sathyavara Village, Sulibele Hobli, Hosakote Taluk, Bangalore Rural District, and bounded on: East by: Lands of Munikempahna, West by: Lands of K Doddakempanna, North by: Government kunte, and South by: Lands of Hanumantharayappa.
SCHEDULE "B"
All that piece and parcel of agricultural property measuring an extent of 1 acre 05 guntas out of 2 acres 26 guntas in Sy.No. 57/2 of Sathyavara Village, Sulibele Hobli, Hosakote Taluk, and bounded on: East by: Land of Narayanaswamy, West by: Land of Uthanallappa, North by: Land of Uthanallappa, and South by : Sy.No. 57/2.
Given under my hand and seal of this Court at Bengaluru on the day of 27.8.2024.
By order of the Court, Sheristedar, Senior Civil Judge & JMFC, Hosakote.
ADVOCATE OF PLAINTIFF
Address of Service : B.R. Raghavendra, and Babu .N, Advocates,
No. 24, 2nd Floor, 1st Main Road, Seshadripuram, Bangaluru-560020.



PUBLIC NOTICE
It is hereby notified the general public that, our clients have agreed to purchase the Schedule Property from its Owners **SRI. M. NARASIMAIAH (NARASIMHA MURTHY Urf CHIKKA NARASIMHAIAH)**, S/o late Sri.Motappa Urf Munishamappa and others, residing at No.10, Rayasandra Village, Devanahalli Taluk, Bengaluru Rural District – 562 110. If any persons have any manner of claim, right, title, interest or demand of any nature in or over the Schedule Property, they are hereby requested to file their objections along with the photocopies of the documents on which they are relying, with the undersigned within **7 (Seven) days** from the date of publication of this notice. Objection/s received thereafter will not be binding on our clients.
SCHEDULE
All that piece and parcel of the agricultural dry land measuring **1 Acre 5 ½ Guntas** in **Sy.No.54/3 (Old Sy.No.54)**, situated at Rayasandra Village, Kasaba Hobli, Devanahalli Taluk, Bengaluru Rural District and bounded as follows:
East by : Land belongs to Sri.Narasimhaiah S/o Sri.Munigangaiah in Sy.No.54;
West by : Remaining portion of land in Sy.No.54;
North by : Road;
South by : Land in Sy.No.52 & 53
Sd/- AJAY KUMAR. N
For ISHA LAW CHAMBERS LLP
Advocates & Solicitors
No.101, 2nd Floor, Sri Manjunatha Complex, 22nd Main Road, BSK 2nd Stage, Opp : Banashankari BDA Complex, Bengaluru-560070.

CAUTION: Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the Advertisers. The Printer, Publisher, Editor and Owner of Kannada Prabha Publications Ltd., shall not be held responsible /liable for any consequences, in case such claims are found to be false.

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ನಿಗದಿತ ವಾಣಿಜ್ಯ ಬ್ಯಾಂಕ್)
ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು-560071.
ಇ-ಹರಾಜು ಸೂಚನೆ
ಸೆಕ್ಯೂರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು,2002ರ ನಿಯಮ 8(6) ಮತ್ತು 9 ರ ನಿಬಂಧನೆಯೊಂದಿಗೆ ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.
ಸರ್ಫೇಸಿ ಕಾಯಿದೆಯ ಸೆಕ್ಷನ್ 13(4) ಅಡಿಯಲ್ಲಿ **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್**ನ ಅಧಿಕೃತ ಅಧಿಕಾರಿಯಾಗಿ ಕೆಳಸಹಿದಾರರು ಅಧಿಕಾರಗಳನ್ನು ಚಲಾಯಿಸುವ ಮೂಲಕ ಈ ಕೆಳಗಿನ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಬ್ಯಾಂಕಿಗೆ ಬರಬೇಕಾದ ಬಾಕಿಗಳನ್ನು ಸಾರ್ವಜನಿಕರಿಗೆ ಮತ್ತು ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಲಾದ ಅಡಮಾನ ಇಟ್ಟಿರುವ ಸ್ವತ್ತುಗಳನ್ನು ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ **"ಎಲ್ಲಿ ಹೇಗಿದೆಯೋ ಹಾಗೆ"** ಮತ್ತು **"ಎಲ್ಲಿ ಏನಿದೆಯೋ ಹಾಗೆ"** ಈ ಕೆಳಗೆ ನಿಗದಿಪಡಿಸಿದ ದಿನಾಂಕಂದು ಹರಾಜು ಮಾಡಲಾಗುತ್ತದೆ.

ಕ್ರ ಸಂ	ಸಾಲದ ಖಾತೆ ಸಂಖ್ಯೆ	ಸಾಲಗಾರರ/ಸಹ-ಸಾಲಗಾರರು/ ಜಾಮೀನುದಾರರ ಮೂಲ ಹೆಸರು	ಸೂಚನೆ ದಿನಾಂಕ 13-2 ರಂದು	ಸ್ವಾಧೀನ ದಿನಾಂಕ	03-09-2024 ರಂದು ಇದ್ದಂತೆ ಪ್ರಸ್ತುತ ಬಾಕಿ ಮೊತ್ತ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಐಎನ್‌ಆರ್ ಗಳಲ್ಲಿ ಮೀಸಲು ಬೆಲೆ	ಮುಂಗಡ ಠೇವಣಿ (ಐಎನ್‌ಆರ್)	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ ಮತ್ತು ಸ್ಥಳ
1	46989630000652	1. ಶ್ರೀ ಮಂಜುನಾಥ್ ಪಿ 2. ಶ್ರೀಮತಿ ಶೋಭ ಎಂ	06-03-2024	27-08-2024	ರೂ. 2,57,878/- (ರೂಪಾಯಿ ಎರಡು ಲಕ್ಷದ ಐವತ್ತೇಳು ಸಾವಿರದ ಎಂಟು ನೂರ ಎಪ್ಪತ್ತೆಂಟು ಮಾತ್ರ)	26-09-2024 ರಂದು ಬೆಳಿಗ್ಗೆ 9:30 ರಿಂದ ಸಂಜೆ 05:00 ಗಂಟೆಯ ವರೆಗೆ	ರೂ.3,96,000/- (ರೂಪಾಯಿ ಮೂರು ಲಕ್ಷದ ತೊಂಭತ್ತಾರು ಸಾವಿರ ಮಾತ್ರ)	ರೂ.39,600/- (ರೂಪಾಯಿ ಮೂವತ್ತೊಂಭತ್ತು ಸಾವಿರದ ಆರು ನೂರು ಮಾತ್ರ)	10.10.2024 ಮಧ್ಯಾಹ್ನ 02.00 ಗಂಟೆಗೆ	ದಿನಾಂಕ : 09.10.2024 ರಂದು ಸಂಜೆ 5.00 ಗಂಟೆಯ ವರೆಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್, ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು-560071.
	ಆಸ್ತಿಯ ವಿವರಣೆ: ಎಲ್ಲಾ ಭಾಗ ಮತ್ತು ವಿಭಾಗಗಳನ್ನು ಹೊಂದಿರುವ ಆಸ್ತಿ ಸಂಖ್ಯೆ.212, ಇ - ಖಾತಾ ಐಡಿ ನಂ.150300300301021689, ಜೋಡಿ ತಿಮ್ಮಸಂದ್ರ ಗ್ರಾಮ, ದೊಡ್ಡಬಳ್ಳಾಪುರ ಬ್ಲಾಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪ್ರಸ್ತುತ ಕನಸವಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ ಮತ್ತು ಚಕ್ಕುಬಂದಿ :- ಪೂರ್ವ : ರಸ್ತೆ, ಪಶ್ಚಿಮ : ಜಯಮ್ಮ ಕೋಂ ಲೇಟ್ ರಾಮಯ್ಯ ರವರ ನಿವೇಶನ, ಉತ್ತರ: ಸಂದು ಮತ್ತು ಪುಟ್ಟಲಕ್ಷ್ಮಮ್ಮ ಕೋಂ ಮುನಿಗಂಗಯ್ಯ ರವರಿಗೆ ಸೇರಿದೆ ನಂತರ ಮನೆ, ದಕ್ಷಿಣ : ಮುನಿರಾಜು ಬಿನ್ ಲೇಟ್ ಜಮರಯ್ಯ ರವರಿಗೆ ಸೇರಿದ ಆಸ್ತಿ. ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 9.14 ಮೀಟರ್ಸ್ ಮತ್ತು ಉತ್ತರದಿಂದ ದಕ್ಷಿಣಕ್ಕೆ: 5.63 ಮೀಟರ್ಸ್, ಒಟ್ಟು ವಿಸ್ತೀರ್ಣ 51.56 ಚ.ಮೀ.									

ಸ್ವತ್ತುಗಳನ್ನು **"ಎಲ್ಲಿ ಹೇಗಿದೆಯೋ ಹಾಗೆ"** ಮತ್ತು **"ಎಲ್ಲಿ ಏನಿದೆಯೋ ಹಾಗೆ"** 'ಆನ್ ಲೈನ್'ನಲ್ಲಿ ಇ-ಹರಾಜು ನಡೆಸಲಾಗುವುದು. ಬ್ಯಾಂಕಿನ ಅನುಮೋದಿತ ಸೇವಾದಾರರಾದ **ಮೆ॥ 4 ಕ್ಲೋಸರ್‌ನ ವೆಬ್‌ಸೈಟ್ https://bankauctions.in & www.foreclosureindia.com** ಪೋರ್ಟಲ್‌ನಲ್ಲಿ ಹರಾಜು ನಡೆಸಲಾಗುವುದು. ನಿರೀಕ್ಷಿತ ಬಿಡ್ದಾರರು ಸಂಪರ್ಕಿಸಬಹುದು, ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ಸಹಾಯ, ವಿಧಾನ ಮತ್ತು ಇ-ಹರಾಜಿನ ಆನ್‌ಲೈನ್ ತರಬೇತಿಗಾಗಿ **ಮೆ॥ 4 ಕ್ಲೋಸರ್, ಶ್ರೀ ಶ್ರೀನಿವಾಸುಲು, ಸಂಪರ್ಕ ಸಂಖ್ಯೆ: 8142000809. ಇಮೇಲ್ ಐಡಿ: info@bankauctions.in/ srinivas@bankauctions.in** ಇವರನ್ನ ಸಂಪರ್ಕಿಸಬಹುದು. ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ವಿವರಗಳಿಗಾಗಿ ಮತ್ತು ಆಸ್ತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗೆ ದಯವಿಟ್ಟು **ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಅಧಿಕೃತ ಅಧಿಕಾರಿಗಳು, ಶ್ರೀ ರಂಜನ್ ನಾಯಕ್ (ಮೊ.ಸಂ.6362951653), ಶ್ರೀ ಉಮೇಶ್ (ಮೊ.ಸಂ.8050149617) ಮತ್ತು ಶ್ರೀಮತಿ ಸಯೀದಾ (ಮೊ.ಸಂ.7400445147)** ಅಧಿಕೃತ ಅಧಿಕಾರಿಯವರ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗಾಗಿ ಇವರನ್ನ ಸಂಪರ್ಕಿಸಬಹುದು, ಆಸ್ತಿಗಳ ಮೇಲೆ ಯಾವುದೇ ಹೊರೆಗಳಿಲ್ಲ. ಆದಾಗ್ಯೂ ಉದ್ದೇಶಿತ ಬಿಡ್‌ದಾರರು ಹೊರೆಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ವಿಚಾರಣೆಗಳನ್ನು ಮಾಡಬೇಕು. ತಮ್ಮ ಬಿಡ್ ಸಲ್ಲಿಸುವ ಮೊದಲು ಇರಿಸಲಾದ ಆಸ್ತಿಯ ಶೀರ್ಷಿಕೆ. ತಮ್ಮ ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಶೀರ್ಷಿಕೆಯನ್ನು ಹೊಂದಿರಬೇಕು, ಯಾವುದೇ ಷರತ್ತುಬದ್ಧ ಬಿಡ್ ಅನ್ನು ಸ್ವೀಕರಿಸಲಾಗುವುದಿಲ್ಲ. ಅಡಮಾನದ ಆಸ್ತಿಗಳಿಗೆ ನಿಗದಿಪಡಿಸಲಾದ ಇ-ಹರಾಜಿನ ಕುರಿತು ಮೇಲೆ ತಿಳಿಸಲಾದ ಸಾಲಗಾರರು/ಜಾಮೀನುದಾರರು/ ಅಡಮಾನದಾರರಿಗೆ ಈ ಸೂಚನೆಯನ್ನು ನೀಡಲಾಗಿದೆ. ಸಾಲಗಾರರು /ಜಾಮೀನುದಾರರು / ಅಡಮಾನದಾರರಿಗೆ ಹರಾಜಿನ ದಿನಾಂಕದ ಮೊದಲು ಬಡ್ಡಿ ಮತ್ತು ಎಲ್ಲಾ ವೆಚ್ಚಗಳೊಂದಿಗೆ ಮೇಲೆ ತಿಳಿಸಿದಂತೆ ಮೊತ್ತವನ್ನು ಪಾವತಿಸಬೇಕು, ಒಂದು ವೇಳೆ ಉಳಿದಿರುವ ಬಾಕಿ ಮೊತ್ತ ಖರ್ಚು ವೆಚ್ಚಗಳನ್ನು ಮರುಪಾವತಿಸಲು ವಿಫಲರಾದರೆ ಆಸ್ತಿಯನ್ನು ಮಾರಾಟ ಮಾಡಲಾಗುವುದು ಎಂದು ಈ ಸೂಚನೆ ಮೂಲಕ ನೀಡಲಾಗುತ್ತದೆ.
ದಿನಾಂಕ: 06-09-2024, ಸ್ಥಳ: ಬೆಂಗಳೂರು ಗ್ರಾಮಾಂತರ
ಸಹಿ/- ಅಧಿಕೃತ ಅಧಿಕಾರಿಗಳು, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್